OS No. 49/2021

DW-1

**(ಇಂದು ದಿಃ 06-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಮುಂದುವರೆದ ಮುಖ್ಯ ವಿಚಾರಣೆಃ-1ರಿಂದ 3 ನೇ ಪ್ರತಿವಾದಿ ಪರ ಶ್ರೀ.TVP ವಕೀಲರಿಂದಃ-</u>**

ಸಾಕ್ಷಿಗೆ ದಿನಾಂಕ 05.04.1981 ರ ಮೂಲ ವಿಭಾಗ ಪತ್ರ ತೋರಿಸಲಾಗಿ ಅದು ವಾಟಣಿ ಪತ್ರ ಎಂದು ಹೇಳಿದ್ದು ಸದರಿ ಪತ್ರವನ್ನು ನಿಡಿ-131 ಎಂದು ಗುರುತಿಸಲಾಯಿತು. ಸಾಬಣ್ಣ ರಡ್ಡಿ ತನ್ನ 5 ಜನ ಮಕ್ಕಳಿಗೆ ನಿಡಿ-131ನ್ನು ಬರೆದುಕೊಟ್ಟಿದ್ದಾರೆ. ನಿಡಿ-131 ಕ್ಕೆ ನಾಗೇಂದ್ರಪ್ಪ , HC ದೇಸಾಯಿ , ಗುಂಡಪ್ಪ , ಶಿವಯ್ಯ , ಅಯ್ಯಣ್ಣ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಸದರಿ ಸಾಕ್ಷಿದಾರರು ಈಗ ಬದುಕಿಲ್ಲ, ನಿಡಿ-131 ಕ್ಕೆ ನನ್ನ ತಾತ ಸಾಯಬಣ್ಣ ರಡ್ಡಿ ಬಸವರಾಜ , ವೀರಬದ್ರಪ್ಪ , ಸಿದ್ದರಾಮಪ್ಪ , ಮಲ್ಲಿಕಾರ್ಜುನ ಮತ್ತು ಶರಣಪ್ಪ ಸಹಿ ಮಾಡಿದ್ದಾರೆ . ನಾನು ಮಲ್ಲಿಕಾರ್ಜುನರವರ ಮಗ. ಬಸವರಾಜ , ವೀರಬದ್ರಪ್ಪ , ಸಿದ್ದ ರಾಮಪ್ಪ ಮುತ್ತು ಶರಣಪ್ಪ ನನ್ನ ಚಿಕ್ಕಪ್ಪ ದೊಡ್ಡಪ್ಪಂದಿರು ಆಗಬೇಕು . ನಿಡಿ-131 ನ್ನು ಯರಣ್ಣಪ್ಪ ದೇಷಮುಖ ಬರವಣಿಗೆ ಮಾಡಿದ್ದಾರೆ. ಸಾಕ್ಷಿ ನಿಡಿ-131 ರಲ್ಲಿರುವ ನನ್ನ ತಾತ ಸಾಯಬಣ್ಣ ರಡ್ಡಿ ಬಸವರಾಜ , ವೀರಬದ್ರಪ್ಪ , ಸಿದ್ದರಾಮಪ್ಪ , ಮಲ್ಲಿಕಾರ್ಜುನ ಮತ್ತು ಶರಣಪ್ಪ ರವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ-131(ಎ to ಇ) ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಇಲ್ಲ.**

**(ವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**

**ಸೇಡಂ.**